ಬರಲಾರಂಭಿಸಿದಾಗಲೂ ಸಾಗರಿಕಾ ಅಳುಕಿರಲಿಲ್ಲ. ಪ್ರೀತಿಯೆಂದರೆ ಕಂಡಿಷನ್‌ಗಳು ಇಲ್ಲದಂತಿರಬೇಕು ಎನ್ನುವುದು ಅವಳ ನಂಬಿಕೆ. ಆದರೆ ಆ ಗ್ರಹಿಕೆಯೇ ಅವಳಿಗೆ ಕೊನೆಕೊನೆಗೆ ಮುಳುವಾಯಿತು. ಅವಳೊಡನೆ ಚರ್ಚೆ ಮಾಡದೇ ಅವನಿಗೆ ಬೇರೆ ಮದುವೆ ಗೊತ್ತಾದಾಗ, ಅವಳು ತನ್ನನ್ನು ನಿಭಾಯಿಸಿಕೊಳ್ಳಲಾರದೇ ಕೌನ್ಸಿಲರ್ ಬಳಿಗೆ ಬಂದಿದ್ದಳು.

ಭಾರತೀಯ ಸಮಾಜದಲ್ಲಿ ಸಮರ್ಪಣಾ ಮನೋಭಾವವು ಹೆಣ್ಣುಮಕ್ಕಳಲ್ಲಿ ಹೆಚ್ಚಾಗಿ ಮೊಳೆತಿರುವುದರಿಂದ, ಸಂಬಂಧವನ್ನು ಗಂಡಿನಂತೆ ತುಸು ಅಂತರದಿಂದ ನಿಭಾಯಿಸುವುದು ಅವರಿಗೆ ಕಷ್ಟವಾಗಬಹುದು. ಈ ಭಾವನೆ ಗಂಡುಮಕ್ಕಳಲ್ಲಿ ಅಷ್ಟಾಗಿ ಗೋಚರಿಸುವುದಿಲ್ಲ. 'ಅವನಿಗೆ ನಿಷ್ಠಳಾಗಿ ಇರಲಿಲ್ಲ' ಎನ್ನುವ ಗಿಲ್ಟ್ ಹೆಣ್ಣಿನಲ್ಲಿ ಮೂಡಿದಷ್ಟು ತೀವ್ರವಾಗಿ, 'ಅವಳಿಗೆ ಮೋಸ ಮಾಡಿದೆನಲ್ಲ' ಎನ್ನುವ ಗಿಲ್ಟ್ ಗಂಡಿನಲ್ಲಿ ಇರುವುದು ತೀರಾ ಅಪರೂಪ. ಅಪವಾದಗಳಷ್ಟೇ ಇರಬಹುದು. ವ್ಯಕ್ತಿಯೊಬ್ಬ ರೂಪುಗೊಳ್ಳುವುದು ಅವನ ಸಾಮಾಜಿಕ ಪರಿಸರದ ಪ್ರಭಾವಗಳಿಂದ. ಪಿತೃಪ್ರಧಾನ ಸಮಾಜದ ಧೋರಣೆಗಳನ್ನು ಗಂಡು–ಹೆಣ್ಣುಗಳಿಬ್ಬರೂ ಮೈಗೂಡಿಸಿಕೊಂಡು ಬೆಳೆಯುವುದರಿಂದ, ಈ ಹೊಸ ರೀತಿಯ ಸಂಬಂಧದ ಸೌಹಾರ್ದತೆಯನ್ನು ಮೊಗೆದುಕೊಳ್ಳುವುದಕ್ಕೆ ಪೂರ್ವತಯಾರಿಗಳು ಸಾಕಾಗುವುದಿಲ್ಲವೆನಿಸುತ್ತದೆ. ಅಂತಹ ಪ್ರಬುದ್ಧತೆ ಇದ್ದಾಗ ಲಿವ್ ಇನ್ ರಿಲೇಷನ್‌ಶಿಪ್ ಒಡಂಬಡಿಕೆಯನ್ನು ಮಾಡಿಕೊಂಡ ಇಬ್ಬರು ಸಂಗಾತಿಗಳಿಗೂ ಆ ಸಂಬಂಧ ಭಾರವೆನಿಸುವುದಿಲ್ಲ.

ಮಂಗಳೂರಿನ 'ಡೀಡ್ಸ್' ಸಂಸ್ಥೆಯ ನಿರ್ದೇಶಕಿ ಮರ್ಲಿನ್ ಮಾರ್ಟಿಸ್, 'ಲಿವ್ ಇನ್ ರಿಲೇಷನ್‌ಶಿಪ್‌ನಲ್ಲಿ ಸಹಬಾಳ್ವೆಯನ್ನು ಬಯಸುವ ಗಂಡು–ಹೆಣ್ಣು, ತಾವು ಯಾವ ರೀತಿ ಬಾಳುವೆಯನ್ನು ಕಟ್ಟಿಕೊಳ್ಳುತ್ತಿದ್ದೇವೆ ಎಂಬ ಬಗ್ಗೆ ಮುಂಚಿತವಾಗಿಯೇ ಸದೃಢವಾದ ನಿಲುವನ್ನು ಹೊಂದಿರಬೇಕು. ಇಬ್ಬರೂ ಪ್ರೌಢವ್ಯಕ್ತಿಗಳು ಜೊತೆಯಾಗಿ ಬಾಳುವೆ ಮಾಡುವಾಗ ಪರಸ್ಪರರನ್ನು ಗೌರವಿಸುವುದು ಮತ್ತು ಸಮಾನತೆಯೊಂದಿಗೆ ಜೀವನ ಮಾಡುವುದು ಅವರ ಆದ್ಯತೆಯಾಗಿರಬೇಕು. ಈ ಗೌರವಕ್ಕೆ ಮತ್ತು ಪರಸ್ಪರ ಸಮಾನತೆಯ ಧೋರಣೆಗೆ ಧಕ್ಕೆ ಬಾರದಂತೆ ನಡೆದುಕೊಳ್ಳುವುದು ವ್ಯಕ್ತಿಗಳಿಬ್ಬರ ಕರ್ತವ್ಯವಾಗಿರುತ್ತದೆ. ಅಷ್ಟೇ ಅಲ್ಲ, ಸಂಬಂಧದ ಗೌರವಕ್ಕೆ ಧಕ್ಕೆ ಬಂದಾಗ ಅದನ್ನು ಸ್ವಯಂ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಬೇಕಾದ ಪ್ರಯತ್ನಗಳನ್ನೂ ಗಂಡು ಹೆಣ್ಣೇ ಮಾಡಿಕೊಳ್ಳಬೇಕು. ಉದಾಹರಣೆಗೆ ಅವನ ವರ್ತನೆ ತನ್ನ ವೈಯಕ್ತಿಕ ಸ್ಪೇಸ್ ಅನ್ನು ಮೀರಿ ಕಿರಿಕಿರಿ ಉಂಟು ಮಾಡುತ್ತಿದೆ ಎನ್ನುವುದನ್ನು ಅವನಿಗೆ

